ಬಳಕೆಗೆ ರೈತರು ಕಡಿತ ಮಾಡಲು ಅರಣ್ಯ ಇಲಾಖೆಯ ಅನುಮತಿ ಪಡೆಯಬೇಕೆಂಬ ವಿಷಯ ನಿಜವೇ? ಅದರ ಮೌಲ್ಯ ರೂ. 10,000 ಕ್ಕೆ ಮೇಲ್ಪಟ್ಟಿದ್ದರೆ ಉಪ ವಿಭಾಗಾಧಿಕಾರಿಗಳು ಸ್ಥಳ ಪರಿಶೀಲಿಸಿ ಒಪ್ಪಿಗೆ ನೀಡಬೇಕೆಂಬ ನಿಬಂಧನೆ ಇರುವುದು ನಿಜವೇ?

ಆ) ಈ ನಿರ್ಣಯ ತುಂಬಾ ಹಳೆಯದಾಗಿದ್ದು ಸದರಿ ನಿಯಮಕ್ಕೆ ಸರ್ಕಾರದವರು ತಿದ್ದುಪಡಿ ತರಲು ಬಯಸುವರೇ?

ಶ್ರೀ ಹೆಚ್.ಕೆ. ಮೇಟಿ (ಅರಣ್ಯ ಸಚಿವರು) :

ಅ) ಹೌದು. ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ರ ನಿಯಮ 8(2)ರ ಪ್ರಕಾರ ಯಾವುದೇ ಜಮೀನಿನಲ್ಲಿ ಮರಗಳನ್ನು ಕಡಿಯಲು ಸಂಬಂಧಿಸಿದ ವ್ಯಕ್ತಾಧಿಕಾರಿಯವರಿಂದ ಅನುಮತಿ ಪಡೆಯಬೇಕೆಂಬ ನಿಬಂಧನೆ ಇರುತ್ತದೆ. ಸ್ವಂತ ಬಳಕೆಗಾಗಿ ಇದೇ ಕಾಯ್ದೆಯ ನಿಯಮ (6)ರ ಪ್ರಕಾರ ಸ್ಥಳದಲ್ಲಿಯೇ ಸ್ವಂತ ಉಪಯೋಗಕ್ಕೆ ಉಪಯೋಗಿಸಿಕೊಳ್ಳಲು ವರ್ಷವೊಂದಕ್ಕೆ ಒಂದು ಕುಟುಂಬಕ್ಕೆ 2.8 ಘನಮೀಟರ್ ಮರ ಹಾಗೂ 5 ಟನ್ ಸೌದೆಯನ್ನು ಬಳಸಿಕೊಳ್ಳಲು ಅವಕಾಶವಿದೆ. ಕರ್ನಾಟಕ ಅರಣ್ಯ ನಿಯಮ 1969 127(ಎ) ನಿಯಮದ ಪ್ರಕಾರ ಮತ್ತು ಕರ್ನಾಟಕ ಅರಣ್ಯ ಕೈಪಿಡಿ 1976ರ 119ನೇ ನಿಯಮದ ಪ್ರಕಾರ ಕೊಡಗು ಜಿಲ್ಲೆಯಲ್ಲಿ 50,000-00 ರೂ. ಮೌಲ್ಯವಾದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಅದಕ್ಕಿಂತ ಕಡಿಮೆ ಮೌಲ್ಯವಾದಲ್ಲಿ ಉಪವಿಭಾಗಾಧಿಕಾರಿಗಳಿಂದಲೂ ಅಭಿಪ್ರಾಯಪಡೆದು ಅನುಮತಿ ನೀಡಬೇಕೆಂದೂ ಇತರೆ ಹಿಡುವಳಿ ಜಮೀನಿನಲ್ಲಿಯ ಮರಗಳನ್ನು ತೆಗೆಯಲು (ಸ್ವಂತಕ್ಕೆ ಉಪಯೋಗಿಸಿಕೊಳ್ಳಲು) ಅಪೇಕ್ಷಿಸಿದರೆ ಆ ಮರದ ಮೌಲ್ಯ ರೂ. 10,000-00 ಕ್ಕೂ ಮೇಲ್ಪಟ್ಟಿದ್ದರೆ ಸಂಬಂಧಿಸಿದ ಜಿಲ್ಲಾಧಿಕಾರಿಯವರು ರೂ. 10,000-00ಕ್ಕಿಂತ ಕಡಿಮೆ ಮೌಲ್ಯವಾದ್ದಲ್ಲಿ ಉಪ ವಿಭಾಗಾಧಿಕಾರಿಯವರು ಸ್ಥಳ ಪರಿಶೀಲಿಸಿ ಮರಗಳು ಹಾಗೂ ಜಮೀನಿನ ಹಕ್ಕಿನ ಬಗ್ಗೆ ಅಭಿಪ್ರಾಯ ಸಲ್ಲಿಸಬೇಕೆಂದು ನಿಬಂಧನೆ ಇದೆ.

ಆ) ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ಕ್ಕೆ ತಿದ್ದುಪಡಿ ಮಾಡುವ ವಿಷಯವನ್ನು ಪರಿಶೀಲಿಸಲಾಗುವುದು.

ಹುಬ್ಬಳ್ಳಿ ನಗರದಲ್ಲಿ ಸರಕಾರಿ ಶಿಶುವಿಹಾರಗಳು

852 - ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಸರ್ಕಾರಿ ಶಿಶುವಿಹಾರಗಳೆಷ್ಟು? ಕೊಳಚೆ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕನಿಷ್ಟ ಮಟ್ಟದ ಶಿಶುವಿಹಾರಗಳನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?